


### ಪರಿಸರಸ್ನೇಹಿ ಫ್ಯಾಷನ್

ಹೆಚ್ಚು ಉಡುಪುಗಳನ್ನು ಹೊಂದುವುದು ಆಡಂಬರದ ಪ್ರದರ್ಶನವಷ್ಟೇ ಎಂದು ಭಾವಿಸಿದ್ದ ನನಗೆ ಇದು ಪರಿಸರಕ್ಕೂ ಹೆಚ್ಚು ಹಾನಿಕರ ಎಂದು ತಿಳಿದು ಆಶ್ಚರ್ಯವಾಯಿತು. ವಾಯುಮಾಲಿನ್ಯ, ಜಲಮಾಲಿನ್ಯ, ಶಬ್ದಮಾಲಿನ್ಯದಂತೆ ವಸ್ತ್ರಗಳಿಂದಲೂ ಪರಿಸರಕ್ಕೆ ಬಹಳಷ್ಟು ಹಾನಿಯಾಗುತ್ತದೆ ಎಂದು ತಿಳಿದು ದಿಗ್ಭ್ರಮೆಯಾಯಿತು.

—ಬಿ. ಶೋಭಾ ಅರಸ, ಅರೆಬೈಲು ತೆಕ್ಕಟ್ಟೆ

‘ಫ್ಯಾಷನ್’ ಅನ್ನುವುದು ಇತಿಮಿತಿಯಲ್ಲಿರಬೇಕು. ಫ್ಯಾಷನ್ ಹೆಸರಿನಲ್ಲಿ ಅರೆಬರೆ ಬಟ್ಟೆ ಧರಿಸಿ ಅಸಹ್ಯ ರೀತಿಯ ವರ್ತನೆ ಮಾಡಬಾರದು. ‘ಪರಿಸರಸ್ನೇಹಿ ಫ್ಯಾಷನ್’ ಯಾವ ರೀತಿ ಇದ್ದರೇ ಚಂದ, ಅದರಿಂದ ಅನುಭವಗಳ ಬಗ್ಗೆ ಮಾಹಿತಿ ತಿಳಿಯಿತು.

—ಪಿ. ಗೋವಿಂದರಾಜ್, ಶಿವಮೊಗ್ಗ

ಸುರೇಖಾ ಹೆಗಡೆ ಬರೆದ ಲೇಖನ ಚೆನ್ನಾಗಿದೆ. ಈಗ ಮಾಲ್ ಹಾಗೂ ಷೋರೂಂಗಳಲ್ಲಿ ಒಂದು ಕೊಂಡರೆ ಎರಡು ಉಚಿತ, ಶೇ 50–60 ಡಿಸ್ಕೌಂಟ್ ನೋಡಿ ಬೇಡದಿದ್ದರೂ ಖರೀದಿಸಿ ಮನೆ ತುಂಬಿಸುತ್ತೇವೆ. ಮೊದಲೆಲ್ಲ ಸಂಬಂಧಿಕರು ಹಾಗೂ ಸ್ನೇಹಿತರು ಮನೆಗೆ ಬಂದರೆ, ಸಮಾರಂಭಗಳಲ್ಲಿ ಅರಿಶಿಣ ಕುಂಕುಮ, ರವಿಕೆ ಖಣ ಕೊಟ್ಟರೆ ಆಗ್ತಿತ್ತು. ಆದ್ರೆ ಈಗ ಸೀರೆ ಕೊಡುವ ಪದ್ಧತಿ ಬಂದಿದೆ. ಅದನ್ನು ಉಡುತ್ತಾರೆಂಬುದು ಅನುಮಾನ. ಯಾಕೆಂದರೆ ನಮಗೆ ಬೇಕಾದ ಬಣ್ಣ, ಗುಣಮಟ್ಟ ಅದಕ್ಕಿರುವುದಿಲ್ಲ. ಪರಿಸರಸ್ನೇಹಿ ಬಟ್ಟೆಗಳನ್ನು ಕೊಳ್ಳುವುದಷ್ಟೇ ಅಲ್ಲ, ಅಗತ್ಯವಿರುವಷ್ಟೇ ಬಟ್ಟೆ ಖರೀದಿಸಬೇಕು ಎಂಬ ಪ್ರಜ್ಞೆ ಕೂಡ ಬೆಳೆಯಬೇಕು.

—ನಿರ್ಮಲಾ ಶ್ರೀನಿವಾಸ್, ಬೆಂಗಳೂರು

### ಹಿರಾನಿ ಮುಂದೇನು?

‘ಸೆಲೆಬ್ರಿಟಿ’ ಪುಟದ ರಾಜ್‌ಕುಮಾರ್ ಹಿರಾನಿ ಲೇಖನದಲ್ಲಿ ಹಿರಾನಿ ತಂದೆ ಸುರೇಶ ಹಿರಾನಿ ದಿನಕ್ಕೆ 16 ಬ್ಯಾಚುಗಳಲ್ಲಿ 1,000 ವಿದ್ಯಾರ್ಥಿಗಳಿಗೆ ಟೈಪಿಂಗ್ ಕಲಿಸುತ್ತಿದ್ದರು ಎಂದಿದೆ. ಇದು ಉತ್ಪ್ರೇಕ್ಷೆ ಇರಬಹುದೇ?

—ಮುಕುಂದ ಹೆರಕಲ್ಲ, ಕಲಬುರ್ಗಿ

### ಕಲಿಕೆಯ ಕಲ್ಪವೃಕ್ಷ ಇಗ್ನೋ

ರಾಘವೇಂದ್ರ ಕೆ. ಅವರ ಲೇಖನ ಚೇತೋಹಾರಿಯಾಗಿತ್ತು. ಮನೆಯಲ್ಲೇ ಕುಳಿತು ಓದಿ ಪದವಿ ಪಡೆಯುವ ಅವಕಾಶ ಕಲ್ಪಿಸುವ ‘ಇಗ್ನೋ’ದ ಉದಾತ್ತ ಉದ್ದೇಶವನ್ನು ವಿವರಿಸುವ ಈ ಲೇಖನವನ್ನೋದಿ ಸಂತೋಷವಾಯಿತು.

—ಬಸವರಾಜ ಹೂಗಾರ, ಹಿರೇಸಿಂಗನಗುತ್ತಿ

ಲೇಖನದಲ್ಲಿ ‘ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯ’, ಮನೆ ಬಾಗಿಲಿಗೆ ಪದವಿಯನ್ನು, ಶಿಕ್ಷಣ ವಂಚಿತರಿಗೆ, ನಿಯಮಿತ ಕರ್ಚಿನಲ್ಲಿ ವಿದ್ಯೆಯನ್ನು ತಲುಪಿಸುತ್ತಿರುವ ಕಾರ್ಯಯೋಜನೆ ಸ್ತುತ್ಯರ್ಹ. ಇದರಿಂದ ವಿದ್ಯಾವಂತರ ಸಂಖ್ಯೆ ಹೆಚ್ಚಾಗಿ ಅವರು ತಮ್ಮ ಬದುಕನ್ನು ಕಟ್ಟಿಕೊಳ್ಳಬಹುದು.

—ಸುಂದರೇಶ್, ಬೆಂಗಳೂರು, ಪಿ. ಮಲ್ಲಿಕಾರ್ಜುನ, ಚಿತ್ರದುರ್ಗ

### ಬಾಯಿ ಚಪಲಕ್ಕೆ ಬಾಲ್ಯದಲ್ಲೇ ಮದ್ದು

ಲೇಖನ (ರಘುನಾಥ ಚ.ಹ.) ಜವಾಬ್ದಾರಿಗಳ ಆವರಣದಲ್ಲಿ ಅನಿಷ್ಟ ಮಾತುಗಾರಿಕೆಗಳನ್ನು ಖಂಡಿಸಿದೆ. ಪಡ್ಡೆ ಹುಡುಗರ ಮಾತುಗಳಂಥ ಹೀನಮಾತುಗಳು ಸ್ಪೀಕರ್‌ರಂಥವರಿಗೆ ಶೋಭಿಸುವುದಿಲ್ಲ. ಹೆಣ್ಣನ್ನು ಪೂಜಿಸುವ ನಾಡೆಂದು ಹೇಳುತ್ತೇವೆ. ಆದರೆ ಸೀರೆ ಸೆರಗು, ಬಳೆ, ಕುಂಕುಮ ಎಲ್ಲವನ್ನು ದೌರ್ಬಲ್ಯದ ಸಂಕೇತವಾಗಿ ಬಳಸುವುದನ್ನು ಲೇಖನ ಬಲವಾಗಿ ಖಂಡಿಸಿದೆ. ಒಂದು ಕಡೆ ಸೀರೆ ಬಳೆ ಕುಂಕುಮಗಳು ಶುಭದ ಸಂಕೇತಗಳು, ಇನ್ನೊಂದೆಡೆ ದೌರ್ಬಲ್ಯಕ್ಕೆ ಉದಾಹರಣೆ. ಏನಿದು ವೈಚಿತ್ರ್ಯ? ಹೆಣ್ಣಿನ ಬಗೆಗಿನ ಅವಹೇಳನಕಾರಿ ಹೇಳಿಕೆಗಳನ್ನು ಆರಂಭದಲ್ಲೇ ಹತ್ತಿಕ್ಕಬೇಕು.

—ಹೆಚ್. ಆನಂದ್‌ಕುಮಾರ್, ಚಿತ್ರದುರ್ಗ, ಮಹಾವೀರ ಕಾಸರ, ಶಿವಮೊಗ್ಗ

### ತೆರಣಿಯ ಹುಳು

ಬಸು ಬೇವಿನಗಿಡದ ಅವರ ಕಥೆ ಓದಿದೆ. ಕಥೆಯ ಬರವಣಿಗೆ, ಆರಂಭ, ಅಂತ್ಯ ಎಲ್ಲವೂ ಅರ್ಥಗರ್ಭಿತವಾಗಿದೆ.

—ಕೊಹಿಮ, ಬಸರಕೋಡು

### ‘ಅಂತರಂಗ ಪುನೀತರು’

ಇದರಲ್ಲಿ ತಮಿಳು ಲೇಖಕರ ಕೃತಿಯನ್ನು ಉಲ್ಲೇಖಿಸಿ ‘ಅತ್ಯಾಚಾರ’ ಎಂಬುದು ಮನಸ್ಸಿಗೂ ಆಗುತ್ತದೆ, ಬರೇ ದೇಹಕ್ಕಲ್ಲ ಎಂದಿರುವುದು ಮನಸ್ಸಿಗೆ ತಾಕುವಂತಿದೆ.

—ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

## ಶೃಂಗಾರದ ಹೊಂಗೆಮರ



ಮಹತಿ ಬರೆದಿರುವ ಹಾಡಿನ ಕುರಿತ ಬರಹ, ಹಾಡಿಗನುಗುಣವಾಗಿ ರಚಿಸಿರುವ ಚಿತ್ರಗಳು, ಮರದ ರೆಂಬೆಕೊಂಬೆಗಳಾಗಿ ರೂಪುತಳೆದಿರುವ ಮಿಥುನ ಚಿತ್ರಗಳು ಹೊಸ ನೋಟವನ್ನು ನೀಡುವಂತಿವೆ. ಅಕ್ಷರಕ್ಕೂ ಕುಂಚಕ್ಕೂ ಹೊಸ ಭಾವ ಬೆಸುಗೆಯಾಗಿದೆ. ಲೇಖಕರು ಈ ಹಾಡಿನ ಕುರಿತ ಬರಹದ ಜತೆಗೆ ‘ವೀರಕೇಸರಿ’ ಚಿತ್ರದ ಹಾಡನ್ನೂ ಉಲ್ಲೇಖಿಸಿದ್ದಾರೆ. ಅಂದಿನ ಚಿತ್ರಗೀತೆಗಳು ಎಷ್ಟು ಮಾರ್ಮಿಕವಾಗಿರುತ್ತಿದ್ದವು... ಎಪ್ಪತ್ತು, ಎಂಬತ್ತರ ದಶಕದ ಹಾಡುಗಳನ್ನು ನೆನಪಿಸಿಕೊಂಡರೆ ಈಗಲೂ ಮೈ ಜುಂ ಎನ್ನುತ್ತದೆ. ಆಗಿನ ರಸಿಕತೆ ಈಗಿಲ್ಲ.

—ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ,
ಕೆ.ವಿ.ರಾಜಲಕ್ಷ್ಮಿ, ಬೆಂಗಳೂರು

ಎರಡೇ ಪುಟಗಳ ಚಿತ್ರ–ಲೇಖನ ‘ಶೃಂಗಾರದ ಹೊಂಗೆ’ ಮನಮೋಹಕವಾಗಿದೆ. ಕೆಲವೊಮ್ಮೆ ಸಹಜವಾಗಿಯೇ ಮರ ಬಳ್ಳಿಗಳು ಚಿತ್ರ ವಿಚಿತ್ರವಾಗಿ ಸೇರಿಕೊಂಡು, ಪ್ರೇಮಿಗಳನ್ನು, ಪ್ರಣಯವನ್ನು ನೆನೆಪಿಸುವುದುಂಟು. ಉಮೇಶ್ ಅವರು ರಚಿಸಿದ ಚಿತ್ರಗಳು ಹಾಗೆಯೇ ಇವೆ. ಯೋಗರಾಜ್ ಭಟ್ಟರ ಕವಿತೆ ಸಹ ಚೆನ್ನಾಗಿದ್ದು ಒಳ್ಳೆಯ ದನಿಯಲ್ಲಿ ಕೇಳಿದಾಗ ಇನ್ನಷ್ಟು ರುಚಿಸಬಹುದು.

—ಡಾ. ಕೆ.ಕೆ. ಜಯಚಂದ್ರ ಗುಪ್ತ, ಹಾಸನ

ಮಾರ್ಚ್ 07ರ ಸಂಚಿಕೆಯ ‘ಮರಳಿ ಬಂದ ಪ್ರಿಯಾಂಕಾ’ ಎಂಬ ಲೇಖನದಲ್ಲಿ ನಟಿ ಪ್ರಿಯಾಂಕಾ ಚೋಪ್ರಾ ಬದಲಿಗೆ ದೀಪಿಕಾ ಪಡುಕೋಣೆ ಚಿತ್ರ ಪ್ರಕಟವಾಗಿದೆ.

—ಪ್ರೇಮಕುಮಾರ್, ಭದ್ರಾವತಿ

ಹೌದು. ತಪ್ಪಾಗಿರುವುದಕ್ಕೆ ವಿಷಾದಿಸುತ್ತೇವೆ.

—ಸಂ.

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in